# ಯಂತ್ರಗಳ ಜತೆ ಕೃಷಿ ವಿಕಾಸ, ರೈತನ ಮೊಗದಲ್ಲಿ ಮಂದಹಾಸ

■ ಎನ್. ಚಲುವರಾಯಸ್ವಾಮಿ



ಕರ್ನಾಟಕ ಕೃಷಿ ಪ್ರಧಾನ ರಾಜ್ಯ, ನಾಡಿನ ಗ್ರಾಮೀಣ ಪ್ರದೇಶದ ಬಹುತೇಕ ಜನರು ಕೃಷಿಯಲ್ಲಿ ತೊಡಗಿದ್ದಾರೆ. ರಾಜ್ಯದಲ್ಲಿ ಸುಮಾರು 86.8 ಲಕ್ಷಕ್ಕೂ ಅಧಿಕ ಭೂ ಹಿಡುವಳಿದಾರರಿದ್ದಾರೆ. ಈ ರಾಜ್ಯದಲ್ಲಿ ಹತ್ತು ಹವಾಮಾನ ವಲಯಗಳಿವೆ. ಭೌಗೋಳಿಕ ವೈಶಿಷ್ಟ್ಯದಿಂದಾಗಿ ಉತ್ತರದ ಬೀದರ್‌ನಿಂದ ದಕ್ಷಿಣದ ಚಾಮರಾಜನಗರದವರೆಗೆ ಆಯಾ ಪ್ರದೇಶಗಳ ಮಣ್ಣಿನ ಗುಣಕ್ಕೆ ಅನುಗುಣವಾಗಿ ಅನೇಕ ಬೆಳೆಗಳನ್ನು ಬೆಳೆಯಲಾಗುತ್ತಿದೆ.

ನಾನು ಕೃಷಿ ಕುಟುಂಬದಿಂದಲೇ ಬಂದವನು. ಕೃಷಿಕರ ಜೀವನದ ಬಗ್ಗೆ, ಅವರ ಕಷ್ಟನಷ್ಟದ ಬಗ್ಗೆ ಅತ್ಯಂತ ಹತ್ತಿರದಿಂದ ಬಲ್ಲೆ. ನಮ್ಮ ಬಾಲ್ಯದ ಕೃಷಿ ಪದ್ಧತಿಗೂ ಇಂದಿನ ಕೃಷಿ ಪದ್ಧತಿಗೂ ಬಹಳ ಬದಲಾವಣೆಯಾಗಿದೆ. ನೇಗಿಲುಗಳ ಸ್ಥಾನಕ್ಕೆ ಟ್ರ್ಯಾಕ್ಟರ್, ಟಿಲ್ಲರ್‌ಗಳು ಬಂದಿವೆ. ಭೂಮಿಯನ್ನು ಉಳುಮೆ ಮಾಡುವುದರಿಂದ ಹಿಡಿದು, ಫಸಲು ತೆಗೆದು ಮಾರುಕಟ್ಟೆಗೆ ಕೊಂಡೊಯ್ಯುವವರೆಗೂ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಕೆ ಮಾಡಲಾಗುತ್ತಿದೆ.

ಕೃಷಿಕರನ್ನು ಸಬಲರನ್ನಾಗಿ ಮಾಡಲು ಆರ್ಥಿಕ ನೆರವಿನ ಜತೆ ಕೃಷಿಗೆ ಪೂರಕವಾಗಿ ನೀರಾವರಿ ಸೌಲಭ್ಯ, ಯಂತ್ರೋಪಕರಣಗಳ ಪೂರೈಕೆ, ವಿದ್ಯುತ್ ಪೂರೈಕೆ ಅಲ್ಲದೆ ಗ್ರಾಮೀಣ ಮಟ್ಟದಲ್ಲಿ ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಿದೆ. ಕೃಷಿ ಸಂಬಂಧಿತ ಎಲ್ಲಾ ಸಮಸ್ಯೆಗಳಿಗೂ ತ್ವರಿತವಾಗಿ ಪರಿಹಾರ ಕಲ್ಪಿಸುವ ವ್ಯವಸ್ಥೆ ರೂಪಿಸಲಾಗಿದೆ.



ವಿಕ VIP ಕಾಲಂ

ನಮ್ಮ ರೈತರಿಗೆ ಕೃಷಿ ಉಪಕರಣಗಳನ್ನು ಕೊಂಡುಕೊಳ್ಳಲು ಆರ್ಥಿಕ ಹೊರೆ ಉಂಟಾಗಬಾರದು ಎನ್ನುವ ದೃಷ್ಟಿಯಿಂದ ಸಬ್ಸಿಡಿ ದರದಲ್ಲಿ ಯಂತ್ರೋಪಕರಣಗಳನ್ನು ಪೂರೈಸಲಾಗುತ್ತಿದೆ. ಪರಿಶಿಷ್ಟ ಜಾತಿ/ ಪಂಗಡದವರಿಗೆ ಶೇ.75ರವರೆಗೆ ಹಾಗೂ ಸಂಘ ಸಂಸ್ಥೆಗಳಿಗೆ ಶೇ.50ರ ವರೆಗೆ ಆಯ್ದ 85 ಕೃಷಿ ಯಂತ್ರೋಪಕರಣಗಳ ಮೇಲೆ ರಿಯಾಯಿತಿ ನೀಡಲಾಗುತ್ತಿದೆ.

ರೈತರಿಗೆ 2023-24ನೇ ಸಾಲಿನಲ್ಲಿ ಸುಮಾರು 943 ಕೋಟಿ ರೂ. ನೆರವನ್ನು ನೀಡಲಾಗಿದೆ. ಅದರಲ್ಲಿ ಅಂದಾಜು 441 ಕೋಟಿ ರೂ. ಸಹಾಯಧನವನ್ನು ಯಂತ್ರೋಪಕರಣಗಳ ಖರೀದಿಗಾಗಿ ಸುಮಾರು 64,000 ರೈತರಿಗೆ ನೀಡಲಾಗಿದೆ. ಹಾಗೆಯೇ, 2.34 ಲಕ್ಷ ರೈತರಿಗೆ 502 ಕೋಟಿ ರೂ. ವೆಚ್ಚದಲ್ಲಿ ಸೂಕ್ಷ್ಮ ನೀರಾವರಿ ಘಟಕವನ್ನು ಕಲ್ಪಿಸಲಾಗಿದೆ. ರೈತ ಉತ್ಪಾದಕ ಸಂಸ್ಥೆಗಳು ಆಹಾರ ಸಂಸ್ಕರಣಾ ಘಟಕ ಪ್ರಾರಂಭಿಸಲು ಕೇಂದ್ರದಿಂದ ಶೇ.35 ಹಾಗೂ ರಾಜ್ಯ ಸರಕಾರದಿಂದಲೂ ಶೇ.15- ಹೀಗೆ ಒಟ್ಟು ಶೇ.50ರಷ್ಟು ರಿಯಾಯಿತಿ ನೀಡಲಾಗುವುದು.

ಇತ್ತೀಚೆಗೆ ಅಮೆರಿಕದಲ್ಲಿ ನಡೆದ Farm Progress Showನಲ್ಲಿ ನಮ್ಮ ಇಲಾಖೆಯ ಅಧಿಕಾರಿಗಳೊಂದಿಗೆ ನಾನೂ ಪಾಲ್ಗೊಂಡಿದ್ದೆ. ಜಗತ್ತಿನ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಅಲ್ಲಿ ಪ್ರದರ್ಶನಕ್ಕೆ ಇಡಲಾಗಿತ್ತು. ಅದೊಂದು ವಿಭಿನ್ನ ಅನುಭವ. ಅವನ್ನೆಲ್ಲ ನೋಡಿದಾಗ ಅಂಥ ಆಧುನಿಕ ತಂತ್ರಜ್ಞಾನವನ್ನು ನಮ್ಮಲ್ಲಿಯೂ ಅಳವಡಿಸಿಕೊಳ್ಳುವ ಆಲೋಚನೆ ಬಂತು. ಈ ಬಗ್ಗೆ ಹೂಡಿಕೆದಾರರ ಜತೆ ಚರ್ಚಿಸಿ, ನಮ್ಮ ರಾಜ್ಯ ಹಾಗೂ ದೇಶದಲ್ಲಿ ಬಳಸಬಹುದಾದ ಯಂತ್ರೋಪಕರಣಗಳನ್ನು ಕರ್ನಾಟಕದಲ್ಲಿಯೇ ತಯಾರಿಸುವಂತೆ ಆಹ್ವಾನಿಸಿದ್ದೇನೆ.

ರೈತರು ತಮ್ಮ ಭೂಮಿಯಲ್ಲಿ ಉತ್ತಮ ಫಸಲನ್ನು ತೆಗೆಯಬೇಕು ಎಂದಾದರೆ ಮಣ್ಣಿನ ಆರೋಗ್ಯ ಬಹುಮುಖ್ಯ. ಆದರೆ, ರಸಗೊಬ್ಬರ ಬಳಕೆಯ ಬಗ್ಗೆ ಸರಿಯಾದ ಮಾಹಿತಿ ಇಲ್ಲದ ಕಾರಣ ಇಂದು ರೈತರು ಅನಗತ್ಯ ಪ್ರಮಾಣದಲ್ಲಿ ಅವುಗಳ ಬಳಕೆ ಮಾಡಿ, ಮಣ್ಣಿನ ಆರೋಗ್ಯ ಕೆಡಿಸುವ ಜತೆ ತಾವು ಬೆಳೆಯುವ ಬೆಳೆಗಳ ಗುಣಮಟ್ಟದಲ್ಲಿ ಕೊರತೆ ಉಂಟಾಗುವ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ನಮ್ಮ ಮುಂದಿನ ಪೀಳಿಗೆಗೂ ಫಲವತ್ತಾದ ಭೂಮಿಯನ್ನು ವರ್ಗಾಯಿಸಬೇಕು ಎನ್ನುವ ಉದ್ದೇಶದಿಂದ ಮಣ್ಣಿನ ಪರೀಕ್ಷೆ ನಡೆಸಿ, ಅದಕ್ಕೆ ಅಗತ್ಯವಾದ ರಸಗೊಬ್ಬರ ಹಾಗೂ ಸಾವಯವ ಸಮತೋಲನೆ ಗೊಬ್ಬರದ ಪ್ರಮಾಣವನ್ನು ಅಂದಾಜಿಸಲು ಸರಕಾರದಿಂದ 'ಭೂಸಾರ' ಎನ್ನುವ ಆ್ಯಪ್ ಪರಿಚಯಿಸಲಾಗಿದೆ.

ಕೃಷಿ ಕ್ಷೇತ್ರದಲ್ಲಿ ಕಾರ್ಮಿಕರ ಕೊರತೆಯನ್ನು ನೀಗಿಸುವುದಲ್ಲದೆ, ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಬಳಸುವ ಮೂಲಕ ಕಡಿಮೆ ಸಮಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಚಟುವಟಿಕೆ ನಡೆಸಲು ರೈತರಿಗೆ ನೆರವಾಗುವ ಉದ್ದೇಶದಿಂದ ಮಿನಿ ಟ್ರ್ಯಾಕ್ಟರ್, ಪವರ್ ಟಿಲ್ಲರ್, ಟ್ರ್ಯಾಕ್ಟರ್‌ಚಾಲಿತ ಎಂ.ಬಿ.ಪ್ರೊ, ರೋಟೋವೇಟರ್, ಡಿಸ್ಕ್ ಹ್ಯಾರೋ ಸೇರಿದಂತೆ ಇನ್ನಿತರ 85 ಬಗೆಯ ಕೃಷಿ ಯಂತ್ರೋಪಕರಣಗಳಿಗೆ ಸರಕಾರದಿಂದ ಸಹಾಯಧನ ನೀಡಲಾಗುತ್ತಿದೆ. ರೈತ ಸಂಪರ್ಕ ಕೇಂದ್ರಗಳಲ್ಲಿ ಈ ಕುರಿತ ಮಾಹಿತಿಗಳಿದ್ದು, ರೈತರು ಈ ಯೋಜನೆಗಳ ಪ್ರಯೋಜನ ಪಡೆಯಬಹುದು.

ಡ್ರೋನ್ ತಂತ್ರಜ್ಞಾನವನ್ನು ಬಳಸಿ ವಿವಿಧ ಜಿಲ್ಲೆಗಳಲ್ಲಿ ನ್ಯಾನೋ ಯೂರಿಯಾ ಹಾಗೂ ನ್ಯಾನೋ ಡಿಎಪಿ ಸಿಂಪಡಣೆಗೆ ಪ್ರೋತ್ಸಾಹ ನೀಡಿ ಕೃಷಿಯಲ್ಲಿ ಕಾರ್ಮಿಕರ ಕೊರತೆ ನೀಗಿಸಲು ಕೃಷಿಯಲ್ಲಿ ಡ್ರೋನ್ ತಂತ್ರಜ್ಞಾನ ಬಳಕೆಯನ್ನು ಪ್ರೋತ್ಸಾಹಿಸಲಾಗುತ್ತಿದೆ.

ನಮ್ಮ ರೈತರು ಯಾವುದೇ ಕಾರಣಕ್ಕೂ ನಷ್ಟವನ್ನು ಅನುಭವಿಸಬಾರದು, ಸಾಲ ಬಾಧೆ ಅವರನ್ನು ಕಾಡಬಾರದು ಎನ್ನುವುದು ನಮ್ಮ ಆಶಯ. ಈ ದಿಶೆಯಲ್ಲಿ ನಿರಂತರವಾಗಿ ರೈತರ ಸಂಪರ್ಕದಲ್ಲಿದ್ದು, ಅವರ ಕುಂದು ಕೊರತೆಗಳನ್ನು ಆಲಿಸಿ ತ್ವರಿತವಾಗಿ ಪರಿಹಾರ ಕಲ್ಪಿಸುವುದೇ ನಮ್ಮ ಆದ್ಯತೆ.

(ಲೇಖಕರು: ಕೃಷಿ ಸಚಿವರು, ಕರ್ನಾಟಕ ಸರಕಾರ) •

Vijaya Karnataka Pg.02

### ಕಳೆದ ವರ್ಷ ಬರ, ಈ ಸಲ ವಿಪರೀತ ತೇವಾಂಶಕ್ಕೆ ಬೆಳೆ ನಷ್ಟ। ಬೆಳೆಗಾರರಿಗೆ ಸತತ ಸಂಕಷ್ಟ

# ದ್ರಾಕ್ಷಿ ನುಂಗಿದ ಮಳೆ ಇಬ್ಬನಿ, ರೈತರ ಕಂಬನಿ


■ ಮಂಜುನಾಥ ಕೊಣಸೂರು

ವಿಜಯಪುರ

manjunatha.kp@timesofindia.com

ರಪ್ಪು ಗುಣಮಟ್ಟದ ದ್ರಾಕ್ಷಿ ಬೆಳೆಯುವ ರಾಜ್ಯದ ದ್ರಾಕ್ಷಿ ಕಣಜದಲ್ಲೀಗ ಸತತ ಮಳೆ, ಮೋಡ, ಮಂಜಿನ ವಾತಾವರಣದಿಂದಾಗಿ ಬೆಳೆ ನಲುಗಿದೆ. ಹೂವು, ಗೊಂಚಲು ಕಟ್ಟುವ ಹಂತದಲ್ಲಿರುವ ಬೆಳೆಗೆ ವಿಪರೀತ ತಣ್ಣನೆ ವಾತಾವರಣ ಕಾಡುತ್ತಿದೆ. ಪದೇ ಪದೆ ಹವಾಮಾನ ವೈಪರೀತ್ಯದಿಂದಾಗಿ ಸತತ ನಷ್ಟ ಅನುಭವಿಸುತ್ತಿರುವ ಬೆಳೆಗಾರರಿಗೆ ಮತ್ತೆ ಹಾನಿಯ ಸಂಕಟ ಎದುರಾಗಿದೆ.

2023-24ರಲ್ಲಿ ಭೀಕರ ಬರ, ಹವಾಮಾನ ವೈಪರೀತ್ಯದಿಂದಾಗಿ ನಿರೀಕ್ಷಿತ ಪ್ರಮಾಣದಲ್ಲಿ ದ್ರಾಕ್ಷಿ ಫಸಲು ಬರಲಿಲ್ಲ. ನಷ್ಟ ಅನುಭವಿಸಿದ ರೈತರಿಗೆ ಬೆಳೆವಿಮೆ ಕೂಡ ಸರಿಯಾಗಿ ಸಿಗಲಿಲ್ಲ. ಪ್ರಸಕ್ತ ವರ್ಷ ರೈತರು ಬಂಪರ್ ಬೆಳೆಯ ನಿರೀಕ್ಷೆಯಲ್ಲಿದ್ದರು. ಅದಕ್ಕಾಗಿ ಸೆಪ್ಟೆಂಬರ್, ಅಕ್ಟೋಬರ್ ತಿಂಗಳಲ್ಲಿ ಚಾಟಣಿ (ಫಸಲು ಬಿಡಲು ಕುಡಿ ಕತ್ತರಿಸುವುದು) ಕೂಡ ಮಾಡಿದ್ದರು. ಸದ್ಯ ಹೂವು, ಗೊನೆ ಕಟ್ಟುತ್ತಿದೆ. ಆದರೆ ಕಳೆದೊಂದು ವಾರದಿಂದ ಬಿಸಿಲು ಮಾಯವಾಗಿ ಮಳೆ, ಮೋಡ ಹಾಗೂ ಇಬ್ಬನಿಯಿಂದಾಗಿ ದ್ರಾಕ್ಷಿ ಬೆಳೆಯ ಹೂವು, ಗೊನೆ ಕರಗಿ ಉದುರುತ್ತಿದೆ.



ಮಳೆ, ಇಬ್ಬನಿಂದಾಗಿ ಕರಗಿದ ದ್ರಾಕ್ಷಿ ಗೊನೆ.

> ಕೆಲ ವರ್ಷಗಳಿಂದ ಸತತ ಪ್ರಕೃತಿ ವಿಕೋಪಕ್ಕೆ ದ್ರಾಕ್ಷಿ ಬೆಳೆ ತುತ್ತಾಗುತ್ತಿದೆ. ಬೆಳೆ ವಿಮೆಯೂ ಸರಿಯಾಗಿ ಬಂದಿಲ್ಲ. ಇಂಥ ಸಂಕಷ್ಟದಲ್ಲಾದರೂ ಸರಕಾರ ರೈತರ ನೆರವಿಗೆ ಬರಬೇಕು.
>
> **-ಅಭಯಕುಮಾರ್ ನಾಂದ್ರೇಕರ್**
> ಕರ್ನಾಟಕ ದ್ರಾಕ್ಷಿ ಬೆಳೆಗಾರರ ಸಂಘದ ಅಧ್ಯಕ್ಷ

**ಶೇ.40ರಷ್ಟು ದ್ರಾಕ್ಷಿ ಬೆಳೆ ಹಾನಿ**

ರಾಜ್ಯದ 47 ಸಾವಿರ ಹೆಕ್ಟೇರ್ ದ್ರಾಕ್ಷಿ ಬೆಳೆ ಕ್ಷೇತ್ರದಲ್ಲಿ 40 ಸಾವಿರ ಹೆಕ್ಟೇರ್ ಉತ್ತರ ಕರ್ನಾಟಕದಲ್ಲಿದೆ. ವಿಜಯಪುರ ಜಿಲ್ಲೆಯೊಂದರಲ್ಲೇ 29 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ದ್ರಾಕ್ಷಿ ಬೆಳೆ ಇದೆ. ನಂತರದಲ್ಲಿ ನೆರೆಯ ಬಾಗಲಕೋಟೆ ಹಾಗೂ ಬೆಳಗಾವಿ ಜಿಲ್ಲೆಗಳಿವೆ.

ವಿಜಯಪುರ, ಬಾಗಲಕೋಟೆ, ಬೆಳಗಾವಿ ಜಿಲ್ಲೆಯಲ್ಲಿ ಸದ್ಯ ಶೇ.40ರಷ್ಟು ದ್ರಾಕ್ಷಿ ಬೆಳೆ ಮಳೆ, ಇಬ್ಬನಿಗೆ ಹಾನಿಯಾಗಿದೆ. ಅನೇಕ ರೈತರು ಬೆಳೆಯನ್ನು ಕಿತ್ತೊಗೆಯುತ್ತಿದ್ದಾರೆ. ಅಂದಾಜು 15 ಸಾವಿರ ಹೆಕ್ಟೇರ್‌ಗೂ ಹೆಚ್ಚು ದ್ರಾಕ್ಷಿ ಬೆಳೆ ಮಳೆ, ಇಬ್ಬನಿಗೆ ತುತ್ತಾಗಿದೆ. ಇನ್ನುಳಿದ ಬೆಳೆಯೂ ಡೌನಿ ಮಿಲ್ಡೀವ್ (ದಾವಣಿ) ರೋಗಕ್ಕೆ ಸರಿಯಾಗಿ ಬಂದರೆ ಹೆಕ್ಟೇರ್‌ಗೆ 6-7 ಲಕ್ಷ ರೂ. ಬರುತ್ತಿತ್ತು. ಆದರೀಗ ಹೆಕ್ಟೇರ್‌ಗೆ ಆರೇಳು ಲಕ್ಷ ರೂ. ನಷ್ಟ ಆಗಲಿದೆ ಎಂದು ರೈತರು ಅಳಲು ತೋಡಿಕೊಂಡಿದ್ದಾರೆ.

ದ್ರಾಕ್ಷಿ ವಾಣಿಜ್ಯ ಬೆಳೆಯೆಂದು ಪರಿಗಣಿಸಲ್ಪಟ್ಟಿದ್ದರಿಂದ ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ ಹಾನಿಯಾದರೂ ಪರಿಹಾರ ಸಿಗಲ್ಲ. ಫಸಲ್ ಭಿಮಾ ಯೋಜನೆಗೆ ಈ ಬೆಳೆ ಒಳಪಟ್ಟಿಲ್ಲ. ಹವಾಮಾನ ಆಧಾರಿತ ಬೆಳೆಯಾಗಿದ್ದರಿಂದ ದ್ರಾಕ್ಷಿಯನ್ನು ಬೆಳೆ ವಿಮೆ ಮಾಡಿಸುವುದು ಅನಿವಾರ್ಯವಾಗಿದೆ. ಆದರೂ ಪ್ರತಿ ಹೆಕ್ಟೇರ್‌ಗೆ 14 ಸಾವಿರ ವಿಮಾ ಕಂತು ತುಂಬಿ ಹಾನಿ ಅನುಭವಿಸಿದ ಬೆಳೆಗಾರರಿಗೆ ಬೆಳೆವಿಮೆಯೂ ಕೈಹಿಡಿಯಲಿಲ್ಲ. ನಮ್ಮ ನೆರವಿಗೆ ಸರಕಾರ ಧಾವಿಸಬೇಕೆಂದು ರೈತರು ಕಣ್ಣೀರಿಡುತ್ತಿದ್ದಾರೆ. •

Vijaya Karnataka Pg.06

Vijaya Karnataka Pg.01

ದಾಖಲೆ ನಿರ್ಮಿಸಿದ ಕಾಫಿ ಬೀಜದ ಧಾರಣೆ | ಗಗನಕ್ಕೇರಿದ ಕಾಫಿ ಪುಡಿ ಬೆಲೆ

ಗ್ರಾಹಕರ ಜತೆ ಬೆಳೆಗಾರರಿಗೂ ನಷ್ಟ | ಈರುಳ್ಳಿ ದರ ಏರಿಕೆಗೆ ಕೇಂದ್ರ ಅಂಕುಶ

# ಅಬ್ಬಬ್ಬಾ! ಕಾಫಿ ತುಂಬಾ ಬಿಸಿ

**ಚೇತನ್ ಬೇಲೇನಹಳ್ಳಿ** ಚಿಕ್ಕಮಗಳೂರು
chethan.bp@timesofindia.com

ಭಾರತದ ಕಾಫಿಗೆ ಐತಿಹಾಸಿಕ ಧಾರಣೆ ಸಿಗುವ ಮೂಲಕ ದಾಖಲೆ ನಿರ್ಮಿಸಿದೆ. ಅರೇಬಿಕಾ ಕಾಫಿಗಿಂತ ಕಡಿಮೆ ಧಾರಣೆ ಹೊಂದಿರುತ್ತಿದ್ದ ರೊಬಸ್ಟಾ ಪಾರ್ಚ್‌ಮೆಂಟ್ ಈ ವರ್ಷ 50 ಕೆ.ಜಿ. ಬ್ಯಾಗ್‌ಗೆ 20,000 ರೂ. ತಲುಪುವ ಮೂಲಕ ಭಾರತದ ಕಾಫಿ ಉದ್ಯಮದಲ್ಲಿ ಸಂಚಲನ ಸೃಷ್ಟಿಸಿದೆ. ಕಾಫಿ ಧಾರಣೆ ಹೆಚ್ಚಾಗುತ್ತಿದ್ದಂತೆ ಇತ್ತ ಕಾಫಿಪುಡಿ ಬೆಲೆಯೂ ಗಗನಕ್ಕೇರಿದೆ. ಜಗತ್ತಿನಲ್ಲೇ ಅತಿಹೆಚ್ಚು ಕಾಫಿ ಉತ್ಪಾದಿಸುವ ಬ್ರೆಜಿಲ್, ವಿಯೆಟ್ನಾಂನಲ್ಲಿ ಹವಾಮಾನ ವೈಪರೀತ್ಯದಿಂದ ಇಳುವರಿ ಸಂಪೂರ್ಣ ಕುಂಠಿತವಾಗಿದೆ. ಭಾರತದಲ್ಲೂ ವಾರ್ಷಿಕ ಉತ್ಪಾದನೆಯ ಗುರಿ ತಲುಪಿಲ್ಲ. ಇದರಿಂದ ಲಂಡನ್ ಮಾರುಕಟ್ಟೆಯಲ್ಲಿ ಕಾಫಿಗೆ ಬೇಡಿಕೆ ಹೆಚ್ಚಾಗಿದ್ದು, ಇದು ಧಾರಣೆ ಏರಿಕೆಗೆ ಕಾರಣ. »06

**ಕಾಫಿ ಧಾರಣೆ (50 ಕೆ.ಜಿ ಬ್ಯಾಗ್)**

**20,000 ರೂ.** ರೊಬಸ್ಟಾ ಪಾರ್ಚ್‌ಮೆಂಟ್

**18,000 ರೂ.** ಅರೆಬಿಕಾ ಪಾರ್ಚ್‌ಮೆಂಟ್

**750 ರೂ.** ಕಾಫಿ ಪುಡಿ (ಕೆ.ಜಿ.)



ಮೂಡಿಗೆರೆ ತಾಲೂಕಿನ ಅತ್ತಿಗೆರೆ ಗ್ರಾಮದ ತೋಟವೊಂದರಲ್ಲಿನ ಕಾಫಿ ಫಸಲು.

### ಕಾಫಿ ದುಬಾರಿ

ಕಾಫಿ ಪುಡಿ ತಯಾರಿಕಾ ಘಟಕಗಳಲ್ಲಿ ಕೆಲವರು ಮಾತ್ರ ಸ್ವಂತ ತೋಟದ ಕಾಫಿ ಬೀಜಗಳನ್ನು ದಾಸ್ತಾನು ಇರಿಸಿಕೊಂಡು ತಯಾರಿಸುತ್ತಾರೆ. ಆದರೆ, ಬಹುತೇಕ ಕಾಫಿಪುಡಿ ಉತ್ಪಾದನಾ ಘಟಕಗಳು ಕಾಫಿ ಬೀಜಗಳನ್ನು ಖರೀದಿಸಿಯೇ ತಯಾರು ಮಾಡುತ್ತಾರೆ. ಕಾಫಿ ಧಾರಣೆ 20,000 ರೂ.ಗೆ ತಲುಪಿರುವ ಜತೆಗೆ ಕೊರತೆಯೂ ಉಂಟಾಗಿದೆ. ಇದರಿಂದ ಬೆಂಗಳೂರಿನಲ್ಲಿ ಕಾಫಿ ಪುಡಿ ದರ ಒಂದು ಕೆ.ಜಿ.ಗೆ 100 ರೂ. ಹೆಚ್ಚಾಗಿದೆ. ಚಿಕ್ಕಮಗಳೂರಿನಲ್ಲಿ ಉತ್ತಮ ಗುಣಮಟ್ಟದ ಕಾಫಿ ಪುಡಿ ಕೆ.ಜಿ.ಗೆ 480 ರೂ.ಗೆ ಮಾರಾಟ ಆಗುತ್ತಿದೆ. ಇನ್ನೆರಡು ದಿನದಲ್ಲಿ ಕಾಫಿ ಪುಡಿ ದರವನ್ನು 530 ರೂ.ಗಳಿಗೆ ಹೆಚ್ಚಿಸಲು ಕಾಫಿ ವರ್ಕ್ಸ್ ಮಾಲೀಕರು ಚಿಂತನೆ ನಡೆಸಿದ್ದಾರೆ. ಹೋಟೆಲ್, ಕಾಫಿ ಶಾಪ್‌ಗಳಲ್ಲೂ ಕಾಫಿ ಬೆಲೆ ಹೆಚ್ಚಾಗುವ ಸಾಧ್ಯತೆ ಇದ್ದು, ಕಾಫಿ ಧಾರಣೆಯ ನಿಯಂತ್ರಣ ಅಂತಾರಾಷ್ಟ್ರೀಯ ಮಾರುಕಟ್ಟೆಯನ್ನು ಅವಲಂಬಿಸಿರುವುದರಿಂದ ಇದರ ಮೇಲೆ ಸರಕಾರಗಳು ಹಿಡಿತ ಸಾಧಿಸಲು ಸಾಧ್ಯವಿಲ್ಲ. ಹೀಗಾಗಿ ಬೆಲೆ ಏರಿಕೆಯ ಬಿಸಿಯನ್ನು ಗ್ರಾಹಕರು ಅನುಭವಿಸುವುದು ಅನಿವಾರ್ಯ.

ಕಾಫಿ ಕ್ಯೂರರ್ಸ್ ಬಳಿ ಒಂದಷ್ಟು ದಾಸ್ತಾನಿದ್ದು, ಅದು ಶೀಘ್ರದಲ್ಲೇ ಖಾಲಿಯಾಗುವ ಸಾಧ್ಯತೆ ಇದೆ. ರೊಬಸ್ಟಾ ಕಾಫಿ ಎಲ್ಲಿಯೂ ಸಿಗುತ್ತಿಲ್ಲ. ಇದೇ ಪರಿಸ್ಥಿತಿ ಮುಂದುವರಿದರೆ ಕಾಫಿ ಪುಡಿ ತಯಾರಿಕೆ ನಿಲ್ಲಿಸಿದರೂ ಅಚ್ಚರಿ ಇಲ್ಲ, ಇನ್ನು ಆರು ತಿಂಗಳು ಕಾಫಿ ದರದಲ್ಲಿ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ.

– **ಶ್ರೀಧರ್** ಪಾಂಡುರಂಗ ಕಾಫಿ ವರ್ಕ್ಸ್, ಚಿಕ್ಕಮಗಳೂರು

## ಈರುಳ್ಳಿ ಹೊತ್ತ ರೈಲು ದಿಲ್ಲಿಯತ್ತ



**ಹೊಸದಿಲ್ಲಿ:** ರಾಷ್ಟ್ರ ರಾಜಧಾನಿ ಹೊಸದಿಲ್ಲಿ ಸೇರಿದಂತೆ ಹಲವು ನಗರಗಳಲ್ಲಿ ಈರುಳ್ಳಿ ಬೆಲೆ ಕೆ.ಜಿಗೆ 85 ರೂ.ದಾಟಿರುವ ಹಿನ್ನೆಲೆಯಲ್ಲಿ ಬೆಲೆ ನಿಯಂತ್ರಣಕ್ಕೆ ಕೇಂದ್ರ ಸರಕಾರ ಮುಂದಾಗಿದೆ. ಕೆಲವು ದಿನಗಳ ಹಿಂದೆ ಕೆ.ಜಿಗೆ 35 ರೂ. ದರದಲ್ಲಿ ಈರುಳ್ಳಿ ಮಾರಾಟ ಆರಂಭಿಸಿದ್ದ ಕೇಂದ್ರವು, ಈಗ ಮಾರುಕಟ್ಟೆಯಲ್ಲಿ ಪೂರೈಕೆ ಹೆಚ್ಚಿಸಲು ಮಹಾರಾಷ್ಟ್ರದಿಂದ 1,600 ಟನ್ ಈರುಳ್ಳಿ ತರಿಸಿಕೊಳ್ಳಲು ಕ್ರಮ ಕೈಗೊಂಡಿದೆ. ಈರುಳ್ಳಿಯನ್ನು ತುಂಬಿಕೊಂಡು 'ಕಾಂದಾ ಎಕ್ಸ್‌ಪ್ರೆಸ್' ರೈಲು ಮಹಾರಾಷ್ಟ್ರದ ಲಾಸನ್‌ಗಾಂವ್‌ನಿಂದ ಗುರುವಾರ ಹೊರಟಿದೆ. ಈರುಳ್ಳಿ ಮಾರಾಟದ ಮೊಬೈಲ್ ವ್ಯಾನ್‌ಗಳ ಸಂಖ್ಯೆಯನ್ನು 600ರಿಂದ 1000ಕ್ಕೆ ಹೆಚ್ಚಿಸಲು ಸರಕಾರ ನಿರ್ಧರಿಸಿದೆ.

## ಹಾಲು ಖರೀದಿ ದರ 5 ರೂ. ಏರಿಕೆ?

ಹಾಲು ಒಕ್ಕೂಟಗಳು ರೈತರಿಂದ ಖರೀದಿಸುವ ಹಾಲಿನ ದರವನ್ನು ಲೀಟರ್‌ಗೆ 5 ರೂಪಾಯಿ ಹೆಚ್ಚಿಸಲು ಚಿಂತನೆ ನಡೆದಿದೆ ಎಂದು ಪಶುಸಂಗೋಪನಾ ಸಚಿವ ಕೆ.ವೆಂಟಕೇಶ ಹೇಳಿದ್ದಾರೆ. ಲೀಟರ್ ಹಾಲಿಗೆ 5 ರೂ. ಏರಿಕೆ ಮಾಡುವಂತೆ ರೈತರ ಒತ್ತಾಯವಿದ್ದು, ಈ ಬಗ್ಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಆದರೆ, ಇದರ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸುವ ಬಗ್ಗೆ ಸ್ಪಷ್ಟನೆ ನೀಡಿಲ್ಲ.

The Hindu Pg.07

# Tomatoes stoke fresh fears of food inflation spike this month

Price rise in vegetables had hit a 14-month high of 36% in September, lifting food inflation for consumers to 9.2%; with mandi arrivals of tomatoes shrinking and festive fervour fuelling demand, prices are beginning to pinch households again

**The Hindu Bureau**
NEW DELHI/CHENNAI

Last Tuesday, Umakant, a vegetable seller in South Delhi's Prakash Mohalla, who buys his stocks from the Okhla Mandi, witnessed many potential buyers turn away, as prices of many vegetables, had risen sharply, led by a spike in prices of tomatoes that he was selling at ₹120 per kg.

Retail tomato prices had jumped 233% in July relative to June, but eased about 23% in August, bringing some relief. However, the excess rainfall in September has sparked a fresh challenge with Mandi arrivals more than halving from August.

On a year-on-year basis, vegetable inflation shot up to a 14-month high of 36% in September. For tomatoes, the situation appears worse since the initial days of October, pushing the key kitchen staple beyond the ₹100-a-kilo mark in many cities of the country, even as onion and potato prices continue to pinch.


On October 7, the Centre intervened in the market, launching tomato sales at ₹65 per kg in Delhi NCR. The Consumer Affairs Ministry termed the price rise "unwarranted" and pointed to the 'possible role of market intermediaries' amid 'this high demand festive season'.

## Why are tomato prices rising?

A combination of decline in sowing and unusually high rainfall in late September meant mandi arrivals of tomato fell sharply in October. Due to the demand-supply mismatch, wholesale and retail prices of tomatoes skyrocketed, with the prices relatively higher in northern and eastern regions of India. By **Nitika Francis and Vignesh Radhakrishnan**

**Chart 1: Sowing declines**


Area (in lakh hectares) of tomato crop sown in the current and last year on various dates




Sowing of tomato declined this year. As of Oct. 4, 2.44 lakh hectares (lha) was sown, 0.2 lha less than last year and 0.49 lha less than the target

**Chart 3: Arrivals decline**

Arrivals of tomatoes across all mandis (in crore kgs) and modal prices (in ₹/kg)




Arrivals drastically declined in October (36% y-o-y), leading to a surge in mandi prices (modal value) touching ₹45/kg



**Chart 2: High rainfall in late September**

Weekly variation in rainfall compared to LPA* in regions falling under the tomato production belt

| Divisons in tomato belt | June 1-5 | | | | July 3-9 | | | | | August 7-13 | | | | September 4-10 | | | | |
|---|---|---|---|---|---|---|---|---|---|---|---|---|---|---|---|---|---|---|
| Rayalaseema | LE | LE | LE | D | D | N | N | N | LD | E | E | LE | LD | LE | D | LE | N | D |
| S.I. Karnataka* | E | LE | D | D | N | N | LE | LE | LE | N | N | LE | D | N | D | LD | D | D |
| West M.P. | N | D | D | E | N | E | N | N | E | E | N | D | LE | N | LE | LE | D | LE |
| Odisha | LE | LD | LD | D | E | D | D | LE | N | E | D | D | N | N | E | N | N | LE |
| Gujarat Region | LD | D | LD | N | E | D | N | E | E | N | D | LD | LE | LE | LE | D | D | LE |
| Madhya Maharashtra | D | LE | D | N | N | E | E | LE | LE | E | D | E | LE | N | N | LD | N | LE |

*LPA: Long period average
*S.I.: South interior

In the graph, LE: Large excess rainfall; E: Excess, N: Normal, D: Deficient, LD: Large deficient. In the last week of September, large excess rainfall in four of the six major tomato production belts destroyed tomatoes ready for sale

**Chart 4: Retail prices spike**

Chart shows average retail prices every month in ₹/kg

| Zone | Oct. 2023 | | | | | Mar. 2024 | | | | | | | Oct. 2024 |
|---|---|---|---|---|---|---|---|---|---|---|---|---|---|
| North | 27 | 41 | 39 | 31 | 34 | 36 | 36 | 32 | 31 | 68 | 53 | 46 | 70 |
| West | 25 | 34 | 30 | 27 | 31 | 30 | 28 | 29 | 39 | 66 | 45 | 40 | 58 |
| East | 33 | 43 | 41 | 31 | 28 | 27 | 29 | 30 | 39 | 64 | 53 | 49 | 64 |
| South | 21 | 33 | 32 | 31 | 29 | 25 | 29 | 33 | 55 | 56 | 33 | 33 | 56 |

The average retail prices shot up to ₹65-70 per kilo in the northern and the eastern regions in October. In the south and the west, the spikes were relatively less pronounced, with the retail prices ranging from ₹55-58 per kg

Source: Agmarknet, Dept. of Consumer Affairs, IMD